**ಎಸ್.ಸಿ. ಕೇಸ್ ನಂ. 36/2014**

**ದೋ.ಸಾ. : 40 ಫ್ರಾ.ಸಾ. :40**

ಸಾಕ್ಷಿಯ ಹೆಸರು : ಡಾಃ ಗೀತಾ ಲಕ್ಷ್ಮೀ

**ದಿನಾಂಕಃ 08-01-2026 ರಂದು ಸಾಕ್ಷಿಯು ವಿ.ಸಿ ಮೂಲಕ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

5. ಸಾಕ್ಷಿಯು ತಾನು ನೀಡಿದ ಸಿರಾಲೊಜಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-92 ಎಂದು, ಸಾಕ್ಷಿಯ ಸಹಿಯನ್ನು ನಿಪಿ-92(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ಪರೀಕ್ಷೆ ಮಾಡಿದ ವಸ್ತುಗಳನ್ನು ನೋಡಿ ಗುರುತಿಸಿ, ಅವುಗಳ ಮೇಲೆ BS-63/14 ಎಂದು ಬರೆದು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಅವುಗಳನ್ನು ಈಗಾಗಲೇ ಈ ಕೆಳಗಿನಂತೆ ಅಂದರೆ,

1) 1A1 ರಲ್ಲಿ ರಕ್ತದ ಕಲೆಗಳು ಇರುವ ಸಿಮೆಂಟಿನ ಚೂರುಗಳನ್ನು ಎಂ.ಓ-1 ಎಂದು, 2) 1A2 ರಲ್ಲಿ ಮಾದರಿ ಸಿಮೆಂಟಿನ ಚೂರುಗಳನ್ನು ಎಂ.ಓ-2 ಎಂದು, 3) 1A3 ರಲ್ಲಿ ರಕ್ತದ ಕಲೆಗಳು ಇರುವ ಸಿಮೆಂಟಿನ ಚೂರುಗಳನ್ನು ಎಂ.ಓ-3 ಎಂದು, 4) 1A4 ರಲ್ಲಿ ಮಾದರಿ ಸಿಮೆಂಟಿನ ಚೂರುಗಳನ್ನು ಎಂ.ಓ-4 ಎಂದು, 5) 1A5 ರಲ್ಲಿ ರಕ್ತದ ಕಲೆಗಳು ಇರುವ ಎಲೆಗಳನ್ನು ಎಂ.ಓ-5 ಎಂದು, 6) 1A6 ರಲ್ಲಿ ಮಾದರಿ ಎಲೆಗಳನ್ನು ಎಂ.ಓ-6 ಎಂದು, 7) 1A7 ರಲ್ಲಿ ರಕ್ತ ಮಿಶ್ರಿತ ಮಣ್ಣನ್ನು ಎಂ.ಓ-7 ಎಂದು, 8) 1A8 ರಲ್ಲಿ ಮಾದರಿ ಮಣ್ಣನ್ನು ಎಂ.ಓ-8 ಎಂದು, 9) 1A9 ರಲ್ಲಿ ರಕ್ತದ ಕಲೆಗಳು ಇರುವ ಎಲೆಗಳನ್ನು ಎಂ.ಓ-9 ಎಂದು, 10) 1A10 ರಲ್ಲಿ ಮಾದರಿ ಎಲೆಗಳನ್ನು ಎಂ.ಓ-10 ಎಂದು, 11) 1A11 ರಕ್ತ ಮಿಶ್ರಿತ ಮಣ್ಣನ್ನು ಎಂ.ಓ-11 ಎಂದು, 12) 1A12 ರಲ್ಲಿ ಮಾದರಿ ಮಣ್ಣನ್ನು ಎಂ.ಓ-12 ಎಂದು, 13) 3C1 ರಲ್ಲಿ ಒಂದು ಫ್ರಾಕನ್ನು ಎಂ.ಓ-14 ಎಂದು, 14) 3C2 ರಲ್ಲಿ ಒಂದು ಒಳ ಫ್ರಾಕನ್ನು ಎಂ.ಓ-15 ಎಂದು, 15) 3C3 ರಲ್ಲಿ ಒಂದು ಟೈಟ್ಸ್ (ಶಾರ್ಟ್ಸ್)ನ್ನು ಎಂ.ಓ-16 ಎಂದು, 16) 4D1 ರಲ್ಲಿ ಒಂದು ಹಾಫ್ ಪ್ಯಾಂಟ್ (ಚಡ್ಡಿ)ಯನ್ನು ಎಂ.ಓ-17 ಎಂದು, 17) 4D2 ರಲ್ಲಿ ಒಂದು ಶರ್ಟನ್ನು ಎಂ.ಓ.-18 ಎಂದು, 18) 5E1 ರಲ್ಲಿ ಒಂದು ಶರ್ಟನ್ನು

ಎಂ.ಓ.-19 ಎಂದು, 19) 5E2 ರಲ್ಲಿ ಒಂದು ಲುಂಗಿಯನ್ನು ಎಂ.ಓ.-20 ಎಂದು, 20) 5E3 ರಲ್ಲಿ ಒಂದು ಅಂಡರ್ ವೇರನ್ನು ಎಂ.ಓ.-21 ಎಂದು, 21) 6F1 ರಲ್ಲಿ ಒಂದು ಸ್ವೆಟರನ್ನು ಎಂ.ಓ.-30 ಎಂದು, 22) 6F2 ರಲ್ಲಿ ಒಂದು ಸೀರೆಯನ್ನು ಎಂ.ಓ.-31 ಎಂದು, 23) 6F3 ರಲ್ಲಿ ಒಂದು ಲಂಗವನ್ನು ಎಂ.ಓ.-32 ಎಂದು, 24) 6F4 ರಲ್ಲಿ ಒಂದು ಬೌಸ್ಲನ್ನು ಎಂ.ಓ.-33 ಎಂದು, 25) 7G1 ರಲ್ಲಿ ಒಂದು ಕತ್ತಿಯನ್ನು ಎಂ.ಓ.-26 ಎಂದು, 26) 7G2 ರಲ್ಲಿ ಒಂದು ಟೀ ಶರ್ಟನ್ನು ಎಂ.ಓ.-27 ಎಂದು, 27) 7G3 ರಲ್ಲಿ ಒಂದು ಚಡ್ಡಿಯನ್ನು ಎಂ.ಓ.-28 ಎಂದು ಗುರುತಿಸಲಾಗಿರುತ್ತದೆ. ಎಂ.ಓ.-26 ಕತ್ತಿಯ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-26(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದಃ-**

6. ಪರೀಕ್ಷೆಗಾಗಿ ಸ್ವೀಕರಿಸಿದ ವಸ್ತುಗಳನ್ನು ನಮ್ಮ ಸ್ವೀಕೃತಿ ವಿಭಾಗದ ಪ್ರತಿಭಾ ಎನ್ನುವವರು ಪಡೆದುಕೊಂಡಿರುತ್ತಾರೆ. ಸ್ವೀಕೃತಿಗೊಂಡ ನಂತರ ಅದನ್ನು ರಿಜಿಸ್ಟರಿನಲ್ಲಿ ಬರೆಯಲಾಗುತ್ತದೆ ಎಂದರೆ ಸರಿ. ಸದರಿ ರಿಜಿಸ್ಟರನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಅದು, ನಮ್ಮ ಕಚೇರಿಯ ಮಾಹಿತಿಗಾಗಿ ನಿರ್ವಹಿಸುತ್ತೇವೆ ಎಂದು ನುಡಿಯುತ್ತಾರೆ. ಸದರಿ ವಸ್ತುಗಳ ಪರೀಕ್ಷೆಯನ್ನು ನಾನು ದಿ.02-04-2014 ರಂದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸ್ವೀಕೃತಿಗೊಂಡ ನಂತರ ಪರೀಕ್ಷೆಯಾಗುವವರೆಗೆ ಸದರಿ ವಸ್ತುಗಳು ಯಾರ ತಾಬಾದಲ್ಲಿತ್ತು ಎಂಬ ಬಗ್ಗೆ ಯಾವುದೇ ದಾಖಲೆಯನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ ಎಂದರೆ ಸಾಕ್ಷಿಯು, ಅದು ನನ್ನ ತಾಬಾದಲ್ಲಿರುತ್ತದೆ ಎಂದು ನುಡಿಯುತ್ತಾರೆ. ಈ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸಾಕ್ಷಿಯು ಸ್ವೀಕೃತಿಗೊಂಡ ದಿನಾಂಕ ಹಾಗೂ ವಾಪಾಸು ನೀಡಿದ ದಿನಾಂಕದ ಬಗ್ಗೆ ನಮ್ಮ ಬಳಿ ದಾಖಲೆ ಇದ್ದು, ಆ ಅವಧಿಯಲ್ಲಿ ಸದರಿ ವಸ್ತುಗಳು ನನ್ನ ಬಳಿಯೇ ಇರುತ್ತದೆ.

7. ಪರೀಕ್ಷೆಗಾಗಿ ಸ್ವೀಕರಿಸಿದ ವಸ್ತುಗಳನ್ನು ನಮ್ಮ ಸ್ವಾಧೀನದಲ್ಲಿಟ್ಟುಕೊಂಡ ಬಗ್ಗೆ ನಮ್ಮ ಬಳಿ ಕೇಸ್ ರಿಜಿಸ್ಟರ್ ದಾಖಲೆಯನ್ನು ನಿರ್ವಹಿಸಿರುತ್ತೇವೆ. ಸದರಿ ರಿಜಿಸ್ಟರನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ. 2014 ನೇ ಇಸವಿಯಲ್ಲಿ ನಮ್ಮ ಎಫ್.ಎಸ್.ಎಲ್. ಪ್ರಯೋಗಾಲಯವು accreditation ಆಗಿರಲಿಲ್ಲ ಎಂದರೆ ಸರಿ. ನಿಪಿ-92 ಸಿರಾಲಜಿ ವರದಿಯಲ್ಲಿ ನಮೂದಿಸಿರುವ gel diffusion method, cross over method ಗಳು

presumptive category ಯಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ಅದು, confirmative category ಯಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ತಂದೆ ಅಥವಾ ತಾಯಿಯರು AB ಅಥವಾ O ರಕ್ತದ ಗುಂಪನ್ನು ಹೊಂದಿದ್ದರೆ, ಅವರ ಮಕ್ಕಳು A ಅಥವಾ B ರಕ್ತದ ಗುಂಪನ್ನು ಹೊಂದಿರುತ್ತಾರೆ ಎಂದರೆ ಸಾಕ್ಷಿಯು, ಅದನ್ನು ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಯಾವುದೇ ವಸ್ತುಗಳನ್ನು ಪರೀಕ್ಷೆ ಮಾಡದಿದ್ದರೂ ಸಹ, ಸುಳ್ಳು ವರದಿಯನ್ನು ನೀಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ವಿಡಿಯೋ ಕಾನ್ಫರೆನ್ಸ ಮೂಲಕ ಪಡೆಯಲಾಯಿತು. ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.